www.prepp.in

Prepp
Your Personal Exams Guide

KM

TET-2023
ಸಂಭಾವ್ಯ ಕೀ ಉತ್ತರಗಳು
ಪತ್ರಿಕೆ-I (1-5 ನೇ ತರಗತಿ)
03/09/2023

Question Booklet Sl. No.

# QUESTION PAPER BOOKLET – PAPER – I

## (KANNADA MEDIUM ONLY)

**SUBJECTS : Language – I, Language – II, Child Development and Pedagogy, Mathematics and Environmental Studies**

**Maximum Marks : 150** | **09.30 A.M. to 12.00 P.M.** | **Max. Time : 2.30 Hours**

## INSTRUCTIONS TO THE CANDIDATES (Read Carefully)

**Note : Candidates are instructed to confirm**

- **Whether pre-printed O.M.R. has your name and Application number printed on it.**
- **Whether pre-printed O.M.R. Sheet No. and QP Booklet No. are same. If the candidate uses the O.M.R./ QP booklet which doesn't belong to him/her, such O.M.R. sheets are not considered for evaluation.**
- **Fill and shade the application number in the Sl. Number 11 of the O.M.R. sheet.**

1. The sealed Question Paper Booklet contains 150 questions and O.M.R. Answer Sheets. Verify whether the given Question Paper Booklet is of the same PAPER and MEDIUM as the candidate opted in the application.
2. The Questions are printed in Kannada and English Medium. **But in any case of any discrepancies/doubt the question in English Medium is considered as valid.**
3. The Question Paper contains five parts I, II, III, IV and V consisting of **150** Objective Type Questions, **EACH QUESTION CARRYING ONE MARK.**

| Parts | Subjects | Q. No. | Page No. |
|---|---|---|---|
| Part – I | Lang. – I (Kannada, English, Urdu, Tamil, Telugu, Marathi, Hindi, Sanskrit) | 1 to 30 | 2 to 39 |
| Part – II | Lang. – II (Kannada, English, Urdu, Tamil, Telugu, Marathi, Hindi, Sanskrit) | 31 to 60 | 40 to 79 |
| Part – III | Child Development and Pedagogy (Kannada) – III | 61 to 90 | 80 to 84 |
| Part – III | Child Development and Pedagogy (English) – III | 61 to 90 | 85 to 88 |
| Part – IV | Mathematics (Kannada) – IV | 91 to 120 | 89 to 94 |
| Part – IV | Mathematics (English) – IV | 91 to 120 | 95 to 100 |
| Part – V | Environmental Studies (Kannada) – V | 121 to 150 | 101 to 104 |
| Part – V | Environmental Studies (English) – V | 121 to 150 | 105 to 109 |

4. **Part – I contains 30 Questions for the Language – I and Part – II contains 30 Questions for the Language-II. In this Question Paper Booklet Questions pertaining to all Languages have been given. The Languages being answered must tally with the Languages opted by the candidate in online application.**
5. Candidates are required to attempt Questions in Part – II (Language – II) in any Language other than the Language chosen in the Part-I (Language – I).
6. **Questions related to Part – III : Child Development and Pedagogy (Q. No. 61 to 90), Part – IV : Mathematics (Q. No. 91 to 120) and Part – V : Environmental Studies (Q. No. 121 to 150) are given both in Kannada and English medium in the Question Paper Booklet. The Questions answered must tally with the medium opted in the online application.**
7. **All the entries in the circle must be made with BLUE OR BLACK BALL POINT PEN ONLY. Any alteration in the answer counts as invalid. Usage of whitener/overwriting on OMR Answer Sheet is not permitted and such answer booklet is not considered for evaluation.**
8. Each candidate is given carbonless O.M.R. answer sheet along with the original O.M.R. answer sheet. Candidate should return the **ORIGINAL O.M.R. ANSWER SHEET TO THE ROOM SUPERVISOR** and retain the carbonless copy of the same with the candidate.
9. Calculator, mobile phone and any other electronic devices are not allowed.
10. **If a candidate is found committing malpractice, necessary action will be taken against such candidate as per the examination rules.**

www.prepp.in
Prepp Your Personal Exams Guide

# PART – I

## ಭಾಷೆ – I

## ಕನ್ನಡ

**ಸೂಚನೆ : ಈ ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ, ಕೇಳಿರುವ ಪ್ರಶ್ನೆಗಳಿಗೆ (1ರಿಂದ 8) ಉತ್ತರಿಸಿ :**

ರಷ್ಯಾ ದೇಶದ ವೂಲ್ಫ್ ಮೆಸ್ಸಿಂಗ್ ತನ್ನ ಅತೀಂದ್ರಿಯ ಶಕ್ತಿಗಾಗಿ ಪ್ರಸಿದ್ಧನಾಗಿದ್ದ. ಇತರರ ಮನಸ್ಸಿನಲ್ಲಿ ಏನಿದೆ ? ಎಂಬುದನ್ನು ಅವನು ಸರಿಯಾಗಿ ಸ್ಪಷ್ಟವಾಗಿ ಓದಬಲ್ಲ ಸಿದ್ಧಿಯನ್ನು ಪಡೆದಿದ್ದ. ಸರ್ವಾಧಿಕಾರಿ ಸ್ಟ್ಯಾಲಿನ್‌ನಿಂದ ಪರೀಕ್ಷಿತನಾಗಿ ಸೈ ಎನ್ನಿಸಿಕೊಂಡವನಾತ. ಜಗತ್ತಿನ ಅಂದಿನ ಪ್ರಮುಖರಲ್ಲಿ ಐನ್‌ಸ್ಟೀನ್, ಫ್ರ್ಯಾಡ್ ಮತ್ತು ಗಾಂಧೀಜಿ – ಇವರನ್ನು ಭೇಟಿಯಾಗಿ ತನ್ನ ಸಿದ್ಧಿಯನ್ನು ಪ್ರದರ್ಶಿಸಿ ಅವರನ್ನು ಬೆರಗುಗೊಳಿಸಿದ ಆತ, ೧೯೨೭ರಲ್ಲಿ ಭಾರತಕ್ಕೆ ಬಂದಾಗ ಸಬರಮತಿ ಆಶ್ರಮದಲ್ಲಿ ಗಾಂಧೀಜಿಯನ್ನು ಕಂಡು ಮೌನವಾಗಿ ಅವರು ನೀಡಿದ ಆದೇಶವನ್ನು ಮಾಡಿ ತೋರಿಸಿದವನು. ಎರಡನೇ ಮಹಾಯುದ್ಧದ ಹೊತ್ತಿಗೆ ಹಿಟ್ಲರನ ಮೃತ್ಯುಪಾಶವನ್ನು ಹೇಗೋ ತಪ್ಪಿಸಿಕೊಂಡು ಪೋಲೆಂಡನ್ನೂ ಬಿಟ್ಟು ರಷ್ಯಾಕ್ಕೆ ಬಂದು, ಸಾರ್ವಜನಿಕ ಪ್ರದರ್ಶನಗಳನ್ನು ನೀಡುತ್ತಿದ್ದರೂ, ವೈಯಕ್ತಿಕ ಹಾಗೂ ರಾಜಕೀಯ ಭವಿಷ್ಯಗಳನ್ನು ಕುರಿತು ಆತ ಹೇಳುತ್ತಿರಲಿಲ್ಲ. ನೆರೆದ ಜನರಲ್ಲಿ ಯಾರಾದರೂ ಮೌನವಾಗಿದ್ದುಕೊಂಡು ಆತನಿಗೆ ಮಾನಸಿಕವಾಗಿ ಆಜ್ಞೆ ನೀಡಿದರೆ, ಅದನ್ನವನು ಗ್ರಹಿಸಿಕೊಂಡು ಅಂತೆಯೇ ವರ್ತಿಸುತ್ತಿದ್ದ. 'ನಾನು ಮಾಡಬೇಕೆಂದು ನೀವು ಹೇಳಲು ಬಯಸಿರುವ ಅಥವಾ ಸಂಕಲ್ಪಿಸಿರುವ ಆಜ್ಞೆಯನ್ನು ಮಾತ್ರ ಮನಸ್ಸಿನಲ್ಲಿ ಸ್ಪಷ್ಟವಾಗಿ ಚಿಂತಿಸಿ' ಎಂದು ಪರೀಕ್ಷಕರಲ್ಲಿ ನಿವೇದಿಸಿಕೊಳ್ಳುವುದು ಅವನು ಅನುಸರಿಸುತ್ತಿದ್ದ ಕ್ರಮ. ಕೆಲವು ವರ್ಷಗಳ ಹಿಂದೆ ವೈದ್ಯಕೀಯ ವಿದ್ವಾಂಸರ ಮತ್ತು ವಿಜ್ಞಾನಿಗಳ ಎದುರಲ್ಲಿ ಆತ ಒಂದು ಪ್ರದರ್ಶನವನ್ನಿತ್ತ. ಪ್ರದರ್ಶನಕ್ಕೆ ಮೊದಲು ಯಾರ ಮುಖಭಾವವನ್ನೂ ಪರಿಶೀಲಿಸಬಾರದೆಂದು ಅವನ ಕಣ್ಣಿಗೆ ಬಟ್ಟೆ ಕಟ್ಟಿದ್ದರು. ಸಭೆಯಲ್ಲಿದ್ದ ಒಬ್ಬ ಡಾಕ್ಟರ್ ಮೊದಲೇ ನಿಶ್ಚಯ ಮಾಡಿಕೊಂಡಂತೆ ಮೌನವಾಗಿದ್ದುಕೊಂಡು ಒಂದು ಸೂಚನೆಯನ್ನು ಮನಸ್ಸಿನಲ್ಲೇ ಏಕಾಗ್ರತೆಯಿಂದ ಮೆಲುಕು ಹಾಕುತ್ತಿದ್ದರು. ಮೆಸ್ಸಿಂಗ್ ಮೊದಲು ಮೌನವಾಗಿದ್ದು ಅದನ್ನು ಗ್ರಹಿಸಿ, ಬಳಿಕ ಕಣ್ಣಿನ ಬಟ್ಟೆಯನ್ನು ತೆಗೆದುಹಾಕಿ ನಾಲ್ಕನೇ ನಂಬರಿನ ಕುರ್ಚಿಯ ಬಳಿ ನಿಂತುಕೊಂಡ. ಅಲ್ಲಿ ಕುಳಿತ ವ್ಯಕ್ತಿಯ ಕೋಟಿನ ಬಲಕಿಸೆಯಿಂದ ಒಂದು ಸ್ಪಾಂಜನ್ನೂ, ಕತ್ತರಿಯನ್ನೂ ತೆಗೆದುಕೊಂಡು ನೆರೆದ ಜನರಿಗೆ ತೋರಿಸಿ 'ಸ್ಪಾಂಜನ್ನು ಕತ್ತರಿಸಲು ಇಷ್ಟವಿಲ್ಲ' ಎಂದು ಹೇಳಿ ಸೀಮೆಸುಣ್ಣದಿಂದ ಒಂದು ನಾಯಿಯ ಚಿತ್ರವನ್ನು ಆ ಸ್ಪಾಂಜಿನ ಮೇಲೆ ಬರೆದ.

ಈ ಪ್ರಯೋಗದಲ್ಲಿ ಮುಖ್ಯ ತೀರ್ಪುಗಾರರಾಗಿ ಬಂದಿದ್ದ ಹಿರಿಯರು ಮಾನಸಿಕ ಆಜ್ಞೆಯನ್ನು ನೀಡಿದ ಡಾಕ್ಟರನ್ನು ವಿಚಾರಿಸಿದರು. ಆಜ್ಞೆಯನ್ನು ನೀಡಿದ ಡಾಕ್ಟರ್ ತಾನು ನಾಲ್ಕನೇ ನಂಬರಿನ ಕುರ್ಚಿಯಲ್ಲಿ ಕುಳಿತ ತನ್ನ ಸ್ನೇಹಿತನ ಕೋಟಿನ ಜೇಬಿನಲ್ಲಿರುವ ಸ್ಪಾಂಜನ್ನು ನಾಯಿಯ ಆಕಾರದಲ್ಲಿ ಕತ್ತರಿಸುವಂತೆ ಕಲ್ಪಿಸಿದ್ದು ನಿಜವೆಂದು ಒಪ್ಪಿಕೊಂಡ. ಮೆಸ್ಸಿಂಗ್ ಅವನ ಕಲ್ಪನೆಯನ್ನು ಓದಿ ಅಂತೆಯೇ ನಡೆದಿದ್ದ.

ಮಾರ್ಗದರ್ಶಿ ಸ್ಟಡಿ ಸರ್ಕಲ್, ಕೊಪ್ಪಳ
ಕಲ್ಯಾಣ ನಗರ,2ನೇ ಕ್ರಾಸ್, ಕಿನ್ನಾಳ ರಸ್ತೆ,
ಕೊಪ್ಪಳ. ಮೊ: 7760582101

1. ವೂಲ್ಫ್ ಮೆಸ್ಸಿಂಗ್‌ನಲ್ಲಿ ಇದ್ದ ಅತೀಂದ್ರಿಯ ಶಕ್ತಿ
   (1) ಇತರರ ಮಾಂತ್ರಿಕ ಶಕ್ತಿಯನ್ನು ಅರಿಯಬಲ್ಲ ಶಕ್ತಿ
   (2) ಇತರರ ಮನಸ್ಸಿನಲ್ಲಿ ಏನಿದೆ ಎಂಬುದನ್ನು ಅರಿಯಬಲ್ಲ ಶಕ್ತಿ
   (3) ಇತರರ ದೈಹಿಕ ಶಕ್ತಿಯನ್ನು ಅರಿಯಬಲ್ಲ ಶಕ್ತಿ
   (4) ಇತರರು ಮುಂದೆ ಏನು ಮಾಡಬಲ್ಲರು ಎಂಬುದನ್ನು ಅರಿಯಬಲ್ಲ ಶಕ್ತಿ

www.prepp.in

Prepp Your Personal Exams Guide

ಮಾರ್ಗದರ್ಶಿ ಸ್ಟಡಿ ಸರ್ಕಲ್
ಕೊಪ್ಪಳ. ಮೊ: 7760582101

2. ಮೆಸ್ಸಿಂಗನು ಎರಡನೇ ಮಹಾಯುದ್ಧದ ವೇಳೆಗೆ ಇವರ ಮೃತ್ಯುಪಾಶದಿಂದ ತಪ್ಪಿಸಿಕೊಂಡು ಬರುತ್ತಾನೆ
   (1) ಸರ್ವಾಧಿಕಾರಿ ಸ್ಟ್ಯಾಲಿನ್‌ನ ಮೃತ್ಯುಪಾಶ (2) ಐನ್‌ಸ್ಟೀನ್‌ನ ಮೃತ್ಯುಪಾಶ
   (3) ಫ್ರ್ಯಾಡ್‌ನ ಮೃತ್ಯುಪಾಶ (4) ಹಿಟ್ಲರ್‌ನ ಮೃತ್ಯುಪಾಶ

3. ಮೆಸ್ಸಿಂಗನು ಈ ಬಗ್ಗೆ ಹೇಳುತ್ತಿರಲಿಲ್ಲ
   (1) ಸಾಮಾಜಿಕ ಹಾಗೂ ಭೌತಿಕ ಭವಿಷ್ಯದ ಬಗ್ಗೆ (2) ವೈಜ್ಞಾನಿಕ ಹಾಗೂ ರಾಜಕೀಯ ಭವಿಷ್ಯದ ಬಗ್ಗೆ
   (3) ರಾಜಕೀಯ ಹಾಗೂ ವೈಚಾರಿಕ ಭವಿಷ್ಯದ ಬಗ್ಗೆ (4) ವೈಯಕ್ತಿಕ ಹಾಗೂ ರಾಜಕೀಯ ಭವಿಷ್ಯದ ಬಗ್ಗೆ

4. ಮೆಸ್ಸಿಂಗನು ಪ್ರದರ್ಶನ ನೀಡುವ ಮೊದಲು ಮಾಡುತ್ತಿದ್ದುದು
   (1) ಮೊದಲು ಮಾತನಾಡಿ ನಂತರ ಗ್ರಹಿಸುವುದು
   (2) ಮೊದಲು ಓಡಾಡಿ ನಂತರ ಗ್ರಹಿಸುವುದು
   (3) ಮೊದಲು ಮೌನವಾಗಿದ್ದು ನಂತರ ಗ್ರಹಿಸುವುದು
   (4) ಮೊದಲು ಕುಳಿತು ನಂತರ ಓಡಾಡುವುದು

ಮಾರ್ಗದರ್ಶಿ ಸ್ಟಡಿ ಸರ್ಕಲ್, ಕೊಪ್ಪಳ
ಕಲ್ಯಾಣ ನಗರ ... ಕಿನ್ನಾಳ ರಸ್ತೆ
ಕೊಪ್ಪಳ. ಮೊ: 7760582101

5. ಮೆಸ್ಸಿಂಗನು ಪ್ರದರ್ಶನಕ್ಕೆ ಮುಂಚೆ ಇತರರ ಮುಖ ಭಾವವು ಅರಿಯಬಾರದೆಂದು ಮಾಡುತ್ತಿದ್ದ ಕೆಲಸ
   (1) ಕಣ್ಣಿಗೆ ಕಾಡಿಗೆ ಹಚ್ಚುವುದು (2) ಕಣ್ಣಿಗೆ ಬಟ್ಟೆ ಕಟ್ಟುವುದು
   (3) ಕಣ್ಣಿಗೆ ಕನ್ನಡಕ ಧರಿಸುವುದು (4) ಕಣ್ಣಿಗೆ ಔಷಧಿ ಹಾಕುವುದು

6. ಮೆಸ್ಸಿಂಗನು ಪ್ರದರ್ಶನ ನೀಡುವಾಗ ನಾಲ್ಕನೇ ನಂಬರಿನ ಕುರ್ಚಿಯಲ್ಲಿ ಕುಳಿತಿದ್ದವರು
   (1) ವಿಜ್ಞಾನಿ (2) ಡಾಕ್ಟರ್ (3) ಇಂಜಿನಿಯರ್ (4) ಕವಿ

7. ಮೆಸ್ಸಿಂಗನು ಕುರ್ಚಿಯ ಮೇಲೆ ಕುಳಿತ ವ್ಯಕ್ತಿಯ ಕೋಟಿನ ಕಿಸೆಯಿಂದ ತೆಗೆದುಕೊಂಡ ವಸ್ತುಗಳು
   (1) ಸ್ಪಾಂಜು ಹಾಗೂ ಸೀಮೆಸುಣ್ಣ (2) ಕತ್ತರಿ ಹಾಗೂ ನಾಯಿಯ ಚಿತ್ರ
   (3) ಸ್ಪಾಂಜು ಹಾಗೂ ಕತ್ತರಿ (4) ಕತ್ತರಿ ಹಾಗೂ ಸೀಮೆಸುಣ್ಣ

8. 'ಕಿಸೆಯಿಂದ' ಪದದಲ್ಲಿರುವ ವಿಭಕ್ತಿ ಪ್ರತ್ಯಯ
   (1) ಪ್ರಥಮಾ ವಿಭಕ್ತಿ (2) ದ್ವಿತೀಯಾ ವಿಭಕ್ತಿ (3) ತೃತೀಯಾ ವಿಭಕ್ತಿ (4) ಚತುರ್ಥೀ ವಿಭಕ್ತಿ

**ಸೂಚನೆ : ಈ ಕೆಳಗೆ ಕೊಟ್ಟಿರುವ ಪದ್ಯವನ್ನು ಓದಿ, ಕೇಳಿರುವ ಪ್ರಶ್ನೆಗಳಿಗೆ (9 ರಿಂದ 15) ಉತ್ತರಿಸಿರಿ :**

ಎಲ್ಲರಿಗಿಂತ ಮೊದಲೇ ಎದ್ದು
ಅಂಗಳ ಗುಡಿಸಿ ಸಾರಿಸಿ
ರಂಗೋಲಿ ಇಡುವೆ
ರೇಖೆಗಳು ಬಿಟ್ಟು ಹೋಗದಿರಲೆಂದು

ಮಡಿಯುಟ್ಟು ಹೂ ಕೊಯ್ದು
ಕಟ್ಟಿದ್ದೇನೆ ಮಾಲೆ
ಒಂದೇ ದಾರದಲಿ
ಕನಸುಗಳು ಜಾರದಿರಲೆಂದು

www.prepp.in

Prepp
Your Personal Exams Guide

ಮಧ್ಯಾಹ್ನ ತಂದ ಮೀನ
ಹುರುಪೆಗಳ ಹಿಂಜಿ ಸಿಗಿದು
ಮಸಾಲೆ ಅರೆದು ಗಂಜಿ ಬೇಯಿಸುವೆ
ಉರಿಯುವ ಹೊಟ್ಟೆ ತಣ್ಣಗಿರಲೆಂದು

ಎಲ್ಲರೂ ಉಂಡಾದ ಮೇಲೆ ಮಿಕ್ಕಿದಷ್ಟೆ
ನನಗೆ ನಾನೇ ಬಡಿಸಿಕೊಂಡು ಉಣ್ಣಲು
ಕೂತಾಗ ಜಾರುವ ಕಣ್ಣೀರನು ಅನ್ನದಗುಳಲಿ
ಮುಚ್ಚಿಡುತ್ತೇನೆ ಪಾಲಿನ ಜೀವನವೆಂದು

ನಾಲ್ಕಾಗುತ್ತಿದ್ದಂತೆ "ಚಾ ಮಾಡೇ"
ಎಂಬ ಆದೇಶದ ಪಿಡತಗಳನ್ನೆಲ್ಲ ಮುಗಿಸಿ
ಅಡಿಗೆ ಮನೆ ಮತ್ತೆ ಸಿದ್ಧವಾಗುತ್ತದೆ
ಮಾಡುವ ಹೊಸಪಾಕ ಇನ್ನೂ ಬೇಕಾದಷ್ಟಿದೆಯೆಂದು

ಎಲ್ಲರೂ ಉಂಡುಟ್ಟು ಹಾಸಿಗೆಗೆ ಒರಗಿದಾಗ
ಹಿತ್ತಲಿನ ಹಿಂಬಾಗಿಲಲಿ ಮುಸುರೆಗಳ
ಪರಡಿ ತಿಕ್ಕುತ್ತಾ ಕೂತಾಗ ಕೈ ಕರಿಯಾದರೂ
ಆಕಾಶದಲರಳಿದ ನಕ್ಷತ್ರ ನಗುತ್ತದೆ
ಅಥವಾ
ಹಂಗಿಸುತ್ತದೆ

9. ಎಲ್ಲರಿಗಿಂತ ಮೊದಲೇ ಎದ್ದು ಮಾಡುತ್ತಿದ್ದ ಕೆಲಸ
(1) ಮಾಲೆ ಕಟ್ಟುವುದು
(2) ಅಂಗಳ ಗುಡಿಸಿ ಸಾರಿಸುವುದು
(3) ಮಸಾಲೆ ಅರೆದು ಗಂಜಿ ಬೇಯಿಸುವುದು
(4) ಹಿತ್ತಲಿನ ಹಿಂಬಾಗಿಲಲಿ ಮುಸುರೆ ತಿಕ್ಕುವುದು

10. ಮಾಲೆ ಕಟ್ಟಿರುವುದು ಇದಕ್ಕಾಗಿ
(1) ಮಡಿಯುಟ್ಟಿರುವುದರಿಂದ
(2) ಹೂ ಕೊಯ್ದು ತಂದಿರುವುದರಿಂದ
(3) ಕನಸುಗಳು ಜಾರದಿರಲೆಂದು
(4) ಒಂದೇ ದಾರವಿರುವುದರಿಂದ

11. ರಂಗೋಲಿ ಇಡುತ್ತಿರುವುದು
(1) ರೇಖೆಗಳು ಬಿಟ್ಟು ಹೋಗದಿರಲೆಂದು
(2) ಪಾಲಿನ ಜೀವನವೆಂದು
(3) ಎಲ್ಲರಿಗಿಂತ ಮೊದಲೇ ಎದ್ದಿರುವುದರಿಂದ
(4) ಅಂಗಳ ಗುಡಿಸಿ ಸಾರಿಸಿರುವುದರಿಂದ

12. ಉಣ್ಣಲು ಕುಳಿತಾಗ ಅನ್ನದಗುಳಲಿ ಮುಚ್ಚಿಡುವುದು
(1) ಜಾರಿದ ಕನಸುಗಳು
(2) ಬೇಯಿಸಿದ ಮೀನಿನ ತುಂಡುಗಳನ್ನು
(3) ಜಾರುವ ಕಣ್ಣೀರನು
(4) ಜೀವನವನು

13. 'ಹಾಸಿಗೆಗೆ ಒರಗಿದಾಗ' ಎಂಬುದು ಧ್ವನಿಸುವ ಅರ್ಥ
(1) ಹಾಸಿಗೆಯನ್ನು ಕೊಡವಿದಾಗ
(2) ಹಾಸಿಗೆಯನ್ನು ಒರಗಿ ಕುಳಿತಾಗ
(3) ನಿದ್ರೆಗೆ ಜಾರಿದಾಗ
(4) ಹಾಸಿಗೆಯನ್ನು ಸುತ್ತಿಡುವಾಗ

14. ಮುಸುರೆ ತಿಕ್ಕಿ ಕೈ ಕರಿಯಾದಾಗ ಇದು ಹಂಗಿಸುತ್ತದೆ
(1) ಆಕಾಶದಲಿ ಮಿನುಗುವ ನಕ್ಷತ್ರ
(2) ಆಕಾಶದಲಿ ಅರಳಿದ ನಕ್ಷತ್ರ
(3) ಆಕಾಶದಲಿ ನಗುವ ನಕ್ಷತ್ರ
(4) ಮೋಡದ ಮರೆಯ ನಕ್ಷತ್ರ

15. ಪ್ರಸ್ತುತ ಕವಿತೆಯು ಪ್ರತಿನಿಧಿಸುತ್ತಿರುವುದು
(1) ಪುರುಷ ಸಂವೇದನೆಯನ್ನು
(2) ಸ್ತ್ರೀ ಸಂವೇದನೆಯನ್ನು
(3) ಶಿಶು ಸಂವೇದನೆಯನ್ನು
(4) ಬಂಡಾಯವನ್ನು

16. 'ವಿದ್ಯಾರ್ಥಿ ಕೇಂದ್ರಿತ ಬೋಧನಾ ವಿಧಾನ'
(1) ಉಪನ್ಯಾಸ ವಿಧಾನ
(2) ಪಠ್ಯಪುಸ್ತಕ ವಿಧಾನ
(3) ಯೋಜನಾ ವಿಧಾನ
(4) ನಿಗಮನ ವಿಧಾನ

17. ಪದ್ಯಾಂಶಗಳನ್ನು ಓದುವಾಗ ಉಂಟಾಗುವ 'ಉಗ್ಗುವಿಕೆ' ದೋಷ
(1) ಆಲಿಸುವಿಕೆಯ ದೋಷ
(2) ಮಾತುಗಾರಿಕೆಯ ದೋಷ
(3) ಓದುಗಾರಿಕೆಯ ದೋಷ
(4) ಬರೆಯುವಿಕೆಯ ದೋಷ

18. ಸೂತ್ರದಿಂದ ಉದಾಹರಣೆಗಳ ಕಡೆಗೆ ಸಾಗುವ ವ್ಯಾಕರಣ ಬೋಧನಾ ಪದ್ಧತಿ
(1) ಅನುಗಮನ ಪದ್ಧತಿ
(2) ನಿಗಮನ ಪದ್ಧತಿ
(3) ಪ್ರಶ್ನೋತ್ತರ ಪದ್ಧತಿ
(4) ಉಪನ್ಯಾಸ ಪದ್ಧತಿ

19. ವಿದ್ಯಾರ್ಥಿಗಳ ಕಲಿಕೆಯಲ್ಲಿನ ದೋಷಗಳನ್ನು ಕಂಡುಕೊಳ್ಳಲು ಬಳಸುವ ಪರೀಕ್ಷೆ
(1) ಸಂಕಲನಾತ್ಮಕ ಪರೀಕ್ಷೆ
(2) ನೈದಾನಿಕ ಪರೀಕ್ಷೆ
(3) ರೂಪಣಾತ್ಮಕ ಪರೀಕ್ಷೆ
(4) ವಾರ್ಷಿಕ ಪರೀಕ್ಷೆ

20. ವಿದ್ಯಾರ್ಥಿಗಳಲ್ಲಿ ಭಾಷಾ ಸಂವಹನ ಕೌಶಲಗಳನ್ನು ಅಭ್ಯಾಸ ಮಾಡಲು ಸಹಾಯಕವಾಗಿರುವುದು
(1) ವಿಜ್ಞಾನ ಪ್ರಯೋಗಾಲಯ
(2) ಭಾಷಾ ಪ್ರಯೋಗಾಲಯ
(3) ತಂತ್ರಜ್ಞಾನ ಪ್ರಯೋಗಾಲಯ
(4) ಗಣಿತ ಪ್ರಯೋಗಾಲಯ

21. ಶಿಕ್ಷಕರು ವಿದ್ಯಾರ್ಥಿಗಳಲ್ಲಿ ವರ್ತನಾ ಬದಲಾವಣೆಯನ್ನು ಗುರುತಿಸಲು ಬಳಸಬಹುದಾದ ತಂತ್ರ
(1) ಪರೀಕ್ಷಣಾ ತಂತ್ರ
(2) ವೀಕ್ಷಣಾ ತಂತ್ರ
(3) ಆತ್ಮಕಥನ ತಂತ್ರ
(4) ಮನೋಬಿಂಬ ರೂಪಣಾ ತಂತ್ರ

www.prepp.in

Prepp
Your Personal Exams Guide

22. ಕ್ರಿಯಾ ಸಂಶೋಧನೆಯ ಕೊನೆಯ ಹಂತ
   (1) ಸಮಸ್ಯೆಯನ್ನು ಗುರುತಿಸುವುದು
   (2) ಸಮಸ್ಯೆಯನ್ನು ನಿರ್ದಿಷ್ಟಗೊಳಿಸುವುದು
   (3) ಕ್ರಿಯಾ ಸಂಶೋಧನೆಯ ಫಲಗಳು ಹಾಗೂ ಅನ್ವಯ
   (4) ದತ್ತಾಂಶಗಳ ವಿಶ್ಲೇಷಣೆ

23. ಬೋಧನೆ ಯಶಸ್ವಿಯಾಗಿ ನಡೆದು ನಿರೀಕ್ಷಿತ ಫಲ ಪಡೆಯಲು ಸಹಾಯಕವಾಗುವುದು
   (1) ಪಾಠಯೋಜನೆ
   (2) ಗೃಹ ಪಾಠಗಳು
   (3) ಪರಿಹಾರ ಬೋಧನೆ
   (4) ಮೇಲ್ವಿಚಾರಣೆ

24. ಸಹೃದಯಿಗಳ ಕಾವ್ಯರಚನೆಗೆ ಪ್ರೇರಣೆಯನ್ನು ಉಂಟು ಮಾಡುವುದು
   (1) ಚರ್ಚಾಗೋಷ್ಠಿ
   (2) ಕವಿಗೋಷ್ಠಿ
   (3) ವಿಚಾರಗೋಷ್ಠಿ
   (4) ಉಪನ್ಯಾಸ

25. ವ್ಯಾಕರಣಾಂಶಗಳನ್ನು ಪ್ರತ್ಯೇಕವಾಗಿ ಬಿಡಿ ಪದ್ಧತಿಯಿಂದ ಬೋಧಿಸದೆ ಭಾಷೆಯ ಪ್ರಯೋಗದ ಸಂದರ್ಭಗಳಲ್ಲಿ ಪರಿಚಯಿಸುವ ವಿಧಾನ
   (1) ಸಾಂಪ್ರದಾಯಿಕ ವಿಧಾನ
   (2) ಅನುಗಮನ ವಿಧಾನ
   (3) ಪ್ರಾಯೋಗಿಕ ವಿಧಾನ (ಕ್ರಿಯಾತ್ಮಕ ವ್ಯಾಕರಣ)
   (4) ನಿಯಮ ವಿಧಾನ

26. 'ವ್ಯಾಪಾರಿ' ಪದವು ಈ ವಸ್ತುವಾಚಕ
   (1) ರೂಢನಾಮ
   (2) ಅಂಕಿತನಾಮ
   (3) ಅನ್ವರ್ಥನಾಮ
   (4) ಸರ್ವನಾಮ

27. ಕಂದಪದ್ಯದಲ್ಲಿ ಬರುವ ಒಟ್ಟು ಮಾತ್ರೆಗಳು
   (1) 32 ಮಾತ್ರೆಗಳು
   (2) 64 ಮಾತ್ರೆಗಳು
   (3) 51 ಮಾತ್ರೆಗಳು
   (4) 102 ಮಾತ್ರೆಗಳು

28. 'ಪ್ರಸಾದ' ಪದದ ತದ್ಭವ ರೂಪ
   (1) ಹಸನಾದ
   (2) ಪವಿತ್ರವಾದ
   (3) ಹಸಾದ
   (4) ಪರಿಪೂರ್ಣ

29. 'ಮಾತು ಬಲ್ಲವನಿಗೆ ಜಗಳವಿಲ್ಲ ; ಊಟ ಬಲ್ಲವನಿಗೆ ರೋಗವಿಲ್ಲ' ಈ ವಾಕ್ಯದಲ್ಲಿರುವ ಅಲಂಕಾರ
   (1) ಉಪಮಾಲಂಕಾರ
   (2) ರೂಪಕಾಲಂಕಾರ
   (3) ದೃಷ್ಟಾಂತಾಲಂಕಾರ
   (4) ಅರ್ಥಾಂತರನ್ಯಾಸಾಲಂಕಾರ

30. 'ಮಾಡನು' ಪದದಲ್ಲಿರುವ ಕ್ರಿಯಾರ್ಥಕ ರೂಪ
   (1) ವಿಧ್ಯರ್ಥಕ ರೂಪ
   (2) ನಿಷೇಧಾರ್ಥಕ ರೂಪ
   (3) ಸಂಭವನಾರ್ಥಕ ರೂಪ
   (4) ಅವಧಾರಣಾರ್ಥಕ ರೂಪ

Prepp
Your Personal Exams Guide

## PART – II
## Language – II
## ENGLISH

**Read the given passage and answer the questions from 31 to 38 by choosing the most appropriate option.**

Rohith and Vishwa were neighbours. Vishwa was an honest man. He was liked by all the people in the village. This made Rohit jealous. He wanted to get Vishwa into trouble.

One day Rohit went to the judge and complained. "Vishwa has stolen a silver bowl from my house". The judge asked Vishwa to be brought to the court. He said to the judge, "My Lord, I am honest. I did not steal the bowl. Ask Rohit to prove that I stole it". Rohit said, "My lord, we can put his honesty to the test. I will put a piece of red-hot iron in his hands. If he can hold it in his hands, that will prove his honesty". The judge saw that Rohit really wanted to hurt Vishwa. So, he said to Rohit, "If what you say is the truth, then you can prove it by holding the piece of red-hot iron yourself".

Rohit became afraid now. He told the judge, "My lord, I'll go home and look for the bowl once again." And he left the court hastily.

**31.** Rohit was jealous of Vishwa because
(1) he was liked by all the people in the village
(2) he was an honest man
(3) he stole a silver bowl from his house
(4) he was his good neighbour

**32.** According to Rohit, they could put Vishwa's honesty to test by
(1) pouring hot water on his hands
(2) pouring hot oil on his hands
(3) putting his hands in fire
(4) putting a piece of red-hot iron in his hands.

**33.** Rohit became afraid when
(1) He came to the court
(2) He was complaining against Vishwa
(3) The judge told him to prove his honesty.
(4) Vishwa started arguing that he had not stolen the silver bowl

Prepp
Your Personal Exams Guide

34. Rohit complained against Vishwa because
(1) The judge wanted him to complain
(2) He wanted to get Vishwa into trouble
(3) The people of the village wanted him to complain
(4) Rohit had stolen the silver bowl from his house

35. The judge asked Vishwa to be brought to the court because
(1) The judge wanted to greet him
(2) The judge had an impression that Vishwa was dishonest
(3) Rohit had complained against him
(4) The judge wanted to favour Rohit

36. Vishwa was an honest man. The underlined word is a/an
(1) adjective (2) adverb (3) noun (4) verb

37. Present tense form of the word 'complained' is
(1) complaint (2) compliant (3) complain (4) complainant

38. The correct prefix to be added to the word 'honest' is
(1) un (2) mis (3) in (4) dis

**Read the poem below and answer the questions from 39 to 45 by choosing the most appropriate option :**

I think that I shall never see
A poem lovely as a tree;
A tree whose hungry mouth is pressed
Against the earth's sweet flowing breast;
A tree that looks at God all day
And lifts her leafy arms to pray :
A tree that may in summer wear
A nest of robins in her hair :
Upon whose bosom snow has lain :
Who intimately lives with rain
Poems are made by fools like me,
But only God can make a tree.

Prepp
Your Personal Exams Guide

39. 'A tree whose hungry mouth is pressed
Against the earth's sweet flowing breast'
In these lines, 'hungry mouth' refers to
(1) the root of the tree
(2) the branches of the tree
(3) the leaves of the tree
(4) twigs of the tree

40. In the summer, the tree wears in her hair
(1) a bunch of flowers
(2) a cluster of leaves
(3) a pile of snow
(4) a nest of robins

41. 'Poems are made by fools like me'.
The figure of speech used in the given line is
(1) Simile
(2) Metaphor
(3) Personification
(4) Alliteration

42. The poem 'Trees' impresses on the poet's
(1) love for poetry
(2) admiration for trees
(3) respect for the earth
(4) appreciation of robins

43. 'Upon whose bosom snow has lain
Who intimately lives with rain'
Here 'who' refers to
(1) man
(2) robin
(3) God
(4) tree

44. The rhyme scheme used in the poem is
(1) AB AB
(2) AA AA
(3) AA BB
(4) BB BB

45. The poet compares a tree to
(1) a poem
(2) a bird
(3) snow
(4) God

**Answer the questions from 46 to 50 choosing the most appropriate option following the given directions.**

46. This is a matter ______________ importance. The correct word to be filled in the blank is
(1) at
(2) of
(3) in
(4) from

47. He went to ________ USA and bought ________ house.
The correct words to be filled in the blanks are
(1) an, the
(2) the, an
(3) a, a
(4) the, a

48. Water ________ oil do not mix. The correct word to be filled in the blank is
(1) but
(2) yet
(3) so
(4) and

49. Teachers must work for the ________ of their students. The correct word form to be filled in the above blank is
(1) develops
(2) developing
(3) development
(4) developed

50. The correct plural form of 'daughter-in-law' is
(1) daughter-in-law
(2) daughters-in-law
(3) daughters-in-laws
(4) daughter-in-laws

**Answer the questions from 51 to 60, choosing the most appropriate option.**

51. The abbreviation 'etc' is used in a sentence to say
(1) and so on
(2) that is
(3) namely
(4) is an example for

52. The expansion of CCE with reference to assessment is
(1) Comprehensive and Continuous Evaluation
(2) Continuous and Combined Evaluation
(3) Continuous and Comprehensive Evaluation
(4) Child Care Education

53. English language teachers can accommodate students with learning disabilities in their class by
(1) implementing teaching approaches that are good for all
(2) planning for remedial approach
(3) segregating children with learning disabilities
(4) giving only drill activities

www.prepp.in

Prepp
Your Personal Exams Guide

54. In language learning, child portfolio is a
(1) collection of memories
(2) collection of files
(3) collection of student's writing samples
(4) collection of assessment

55. The process of preparing tea can be best represented in the graphic form of
(1) a bar graph
(2) a flowchart
(3) a route map
(4) a pie graph

56. Listening paves the path for the development of three other skills
(1) critical listening, comprehensive listening, discriminative listening
(2) formal listening, casual listening, intensive listening
(3) speaking, reading, writing
(4) extensive listening, picture reading, speaking

57. The three important elements involved in the reading process are
(1) spelling, speed, skill
(2) symbol, sound, sense
(3) pictures, flashcards, charts
(4) clarity, word sense, speed

58. 'Story narration' by the teacher is used to develop
(1) Writing skill
(2) Reading skill
(3) Listening skill
(4) Speaking skill

59. The first step in the process of writing is
(1) Reviewing
(2) Editing
(3) Drafting
(4) Generating ideas

60. Essential components of a good paragraph are
(1) Unity, ambiguity, coherence
(2) Clarity, unity, cohesion
(3) Unity, inconsistency, coherence
(4) Cohesion, imprecise, clarity

www.prepp.in

Prepp
Your Personal Exams Guide

## KANNADA MEDIUM
## PART – III
### ಶಿಶು ವಿಕಸನ ಮತ್ತು ಬೋಧನಾಶಾಸ್ತ್ರ

61. ಒಬ್ಬ ವಿದ್ಯಾರ್ಥಿಯು ಉತ್ತಮ ಶ್ರೇಣಿ ಪಡೆಯಲು ಕಠಿಣ ಅಭ್ಯಾಸ ಮಾಡುತ್ತಾನೆ. ಇದು ಈ ಕೆಳಗಿನ ಪ್ರೇರಣೆಗೆ ಉದಾಹರಣೆಯಾಗಿದೆ
(1) ಆಂತರಿಕ ಪ್ರೇರಣೆ
(2) ಬಾಹ್ಯ ಪ್ರೇರಣೆ
(3) ಸಾಮಾಜಿಕ ಪ್ರೇರಣೆ
(4) ಆಯ್ದ ಪ್ರೇರಣೆ

62. ವ್ಯಕ್ತಿಯ ಬೆಳವಣಿಗೆ ಮತ್ತು ವಿಕಾಸದ ಪ್ರಕ್ರಿಯೆಯ ಮೇಲೆ ಕನಿಷ್ಠ ಪ್ರಭಾವ ಬೀರುವ ಅಂಶ
(1) ಸೂಕ್ತವಾದ ವೈದ್ಯಕೀಯ ಆರೈಕೆ
(2) ಗರ್ಭಾವಸ್ಥೆಯಲ್ಲಿ ತಾಯಿಯ ದೈಹಿಕ ಮತ್ತು ಮಾನಸಿಕ ಆರೋಗ್ಯ
(3) ಕುಟುಂಬದ ಗಾತ್ರ
(4) ಜನನದ ನಂತರ ಮಗುವು ಪಡೆದ ಪೌಷ್ಟಿಕಾಂಶ

63. ಜ್ಞಾನಾತ್ಮಕ ವಿಕಾಸವನ್ನು ನಿರ್ದೇಶಿಸುವಲ್ಲಿ ಸಂಸ್ಕೃತಿ ಮತ್ತು ಸಾಮಾಜಿಕ ಅಂತರಕ್ರಿಯೆಯ ಪರಿಣಾಮವನ್ನು ಒತ್ತಿ ಹೇಳುವ ಸಾಮಾಜಿಕ-ಸಾಂಸ್ಕೃತಿಕ ಸಿದ್ಧಾಂತವನ್ನು ನೀಡಿದ ಮನೋವಿಜ್ಞಾನಿ
(1) ಸಿಗ್ಮಂಡ್ ಫ್ರಾಯ್ಡ್
(2) ಆರ್. ಬಿ. ಕೆಟಲ್
(3) ವೈಗೋಟ್ಸ್ಕಿ
(4) ಹೆಚ್. ಜೆ. ಐಸೆಂಕ್

64. ಇದು ಬೆಳವಣಿಗೆಯ ಚಿಹ್ನೆಯಲ್ಲ
(1) ಇದನ್ನು ಸುಲಭವಾಗಿ ಅಳತೆಮಾಡಬಹುದು
(2) ಬೆಳವಣಿಗೆಯನ್ನು ಭೌತಿಕ ಸಂವೇದನೆಯಾಗಿ ಪರಿಗಣಿಸುತ್ತೇವೆ
(3) ಪಕ್ವತೆಯುಂಟಾದಾಗ ನಿಂತುಹೋಗುತ್ತದೆ
(4) ಗುಣಾತ್ಮಕ ಅಂಶ

65. "ಬಾಲಕಿಯೊಬ್ಬಳು ಯಾವಾಗಲೂ ಇತರೆ ಬಾಲಕಿಯರೊಡನೆ ಆಡಲು ಇಚ್ಛಿಸುತ್ತಾಳೆ". ಇದರ ಸಂಕೇತ
(1) ಲಿಂಗ ಪಾತ್ರ
(2) ಲಿಂಗ ಪ್ರರೂಪ
(3) ಲಿಂಗ ಗುರುತಿಸುವಿಕೆ
(4) ಲಿಂಗ ತಾರತಮ್ಯ

www.prepp.in

Prepp
Your Personal Exams Guide

66. ಹೊಂದಿಸಿ ಬರೆಯಿರಿ :

| A | B |
|---|---|
| (i) ಲಿಂಗ | (a) ಲಿಂಗ ವರ್ತನೆಯನ್ನು ಪ್ರದರ್ಶಿಸುವುದು |
| (ii) ಲಿಂಗ ಪಾತ್ರ | (b) ಜನರ ಗಂಡು ಮತ್ತು ಹೆಣ್ಣು ಎಂಬ ಗುಣಲಕ್ಷಣಗಳು |
| (iii) ಸಂದರ್ಭದಲ್ಲಿ ಲಿಂಗ | (c) ಗಂಡು ಅಥವಾ ಹೆಣ್ಣು ಹೇಗೆ ಆಲೋಚಿಸಬೇಕು ಎಂಬುದರ ನಿರೀಕ್ಷೆಗಳು |

(1) i – b, ii – c, iii – a
(2) i – a, ii – b, iii – c
(3) i – c, ii – a, iii – b
(4) i – b, ii – a, iii – c

67. ಡಿಸ್‌ಕ್ಯಾಲ್ಕುಲಿಯಾ ಎಂಬ ಕಲಿಕಾ ನ್ಯೂನತೆಯು ಸಂಬಂಧಿಸಿರುವುದು
(1) ಬರವಣಿಗೆ
(2) ಗಣಿತ
(3) ಅಂಗಗಳ ಸಹಕಾರ
(4) ಓದುವುದು

68. ಶಿಕ್ಷಕರಿಂದ ಬದಲಾಯಿಸಲಾಗದ ಅಂಶ
(1) ಜ್ಞಾನ
(2) ಸಾಮಾಜಿಕ ಮೌಲ್ಯಗಳು
(3) ರಕ್ತದ ಗುಂಪುಗಳು
(4) ಸಂವೇಗಗಳು

69. ಮಗುವಿನ ಸಾಮಾಜಿಕ ವಿಕಾಸದ ಮೇಲೆ ಪ್ರಭಾವ ಬೀರುವ ಪ್ರಮುಖ ಅಂಶ
(1) ಸಾಮಾಜಿಕ ಒತ್ತಡಗಳು
(2) ಸಾಮಾಜಿಕ ಅಂತರಕ್ರಿಯೆಗಳು
(3) ಸಾಮಾಜಿಕ ಸಂಪರ್ಕಗಳು
(4) ಸಾಮಾಜಿಕ ಬದ್ಧತೆ

70. ಕಲಿಕಾ ಪರಿಕಲ್ಪನೆ ಮೂಡುವಿಕೆಯಲ್ಲಿನ ಮೂರು ಪ್ರಮುಖ ಹಂತಗಳು
(1) ಪ್ರಸ್ತುತಪಡಿಸುವಿಕೆ, ಅಮೂರ್ತತೆ, ಸಾಮಾನ್ಯೀಕರಣ
(2) ಪ್ರಸ್ತುತಪಡಿಸುವಿಕೆ, ಆಕ್ರಮಣಕಾರಿ, ನಿರ್ದಿಷ್ಟತೆ
(3) ಗ್ರಹಿಕೆ, ಅಮೂರ್ತತೆ, ಸಾಮಾನ್ಯೀಕರಣ
(4) ಗ್ರಹಿಕೆ, ಅಮೂರ್ತತೆ, ನಿರ್ದಿಷ್ಟತೆ

71. ವೈಯಕ್ತಿಕ ಭಿನ್ನತೆಗಳಿಗೆ ಅತ್ಯಂತ ಕಡಿಮೆ ಆದ್ಯತೆಯನ್ನು ನೀಡುವ ಬೋಧನಾ ವಿಧಾನ
(1) ಯೋಜನಾ ವಿಧಾನ
(2) ಅನುಗಮನ ವಿಧಾನ
(3) ಪ್ರದರ್ಶನ ವಿಧಾನ
(4) ಉಪನ್ಯಾಸ ವಿಧಾನ

www.prepp.in

Prepp Your Personal Exams Guide

72. "ಮಕ್ಕಳು ಹೆಚ್ಚು ಅನುಭವವಿರುವ ತನ್ನ ಸ್ನೇಹಿತರೊಂದಿಗೆ ಅಂತರಕ್ರಿಯೆಯ ಮೂಲಕ ಕಲಿಯಲು ಸಾಧ್ಯ." ಈ ಆಲೋಚನೆಗೆ ಸಂಬಂಧಿಸಿರುವುದು

(1) ನೈತಿಕ ವಿಕಾಸ ಸಿದ್ಧಾಂತ

(2) ಸಾಮಾಜಿಕ-ಸಾಂಸ್ಕೃತಿಕ ಸಿದ್ಧಾಂತ

(3) ಪರಿಕಲ್ಪನಾ-ಬೆಳವಣಿಗೆ ಸಿದ್ಧಾಂತ

(4) ಜ್ಞಾನಾತ್ಮಕ ಬೆಳವಣಿಗೆ ಸಿದ್ಧಾಂತ

73. ತರಗತಿಯಲ್ಲಿ "ಲೋಹಗಳು ತುಕ್ಕುಹಿಡಿಯುವುದು" ಎಂಬ ಪರಿಕಲ್ಪನೆಯನ್ನು ಅರ್ಥಮಾಡಿಕೊಂಡ ನಂತರ ಮಗು ಮನೆಯಲ್ಲಿನ ಲೋಹಗಳಿಗೆ ಬಣ್ಣವನ್ನು ಲೇಪನ ಮಾಡುತ್ತಿದ್ದಾನೆ. ಮಗುವಿನ ಸಾಮರ್ಥ್ಯ ಈ ಕೆಳಗಿನ ಉದ್ದೇಶಕ್ಕೆ ಸಂಬಂಧಿಸಿದೆ

(1) ಅನ್ವಯ
(2) ಜ್ಞಾನ
(3) ತಿಳುವಳಿಕೆ
(4) ಕೌಶಲ

74. ಕಲಿಕೆ ಎಂಬುದು ಈ ಕೆಳಗಿನ ಅಂಶದಿಂದ ವರ್ತನೆಯಲ್ಲಾಗುವ ಬದಲಾವಣೆ

(1) ಬೋಧನೆ
(2) ಅನುಭವ
(3) ಅಭ್ಯಾಸ
(4) ಬುದ್ಧಿಶಕ್ತಿ

75. ವಿದ್ಯಾರ್ಥಿಯು ಪ್ರಶ್ನೆಗೆ ಉತ್ತರ ನೀಡಲು ವಿಫಲನಾದಾಗ ಶಿಕ್ಷಕರು ಬಳಸಬೇಕಾಗಿರುವ ತಂತ್ರ

(1) ಸುಳಿವು ನೀಡುವುದು

(2) ಪುನರ್‌ನಿರ್ದೇಶಿಸುವುದು

(3) ಪುನರ್‌ಕೇಂದ್ರೀಕರಿಸುವುದು

(4) ಹೆಚ್ಚಿನ ಮಾಹಿತಿ ಸಂಗ್ರಹಣೆ

76. "ಪುನರಾವರ್ತನೆ" ಎಂಬ ಬೋಧನೆಯ ಹಂತ, ಈ ಕೆಳಗಿನ ಕಲಿಕೆಯ ನಿಯಮಕ್ಕೆ ಪ್ರಾಮುಖ್ಯತೆಯನ್ನು ನೀಡುತ್ತದೆ

(1) ಸಿದ್ಧತಾ ನಿಯಮ
(2) ಪರಿಣಾಮ ನಿಯಮ
(3) ಉಪಯೋಗಿಸುವ ನಿಯಮ
(4) ಉಪಯೋಗಿಸದ ನಿಯಮ

77. ಕಿಶೋರರು ಇವರಿಗೆ ಹೆಚ್ಚು ಆದ್ಯತೆಯನ್ನು ನೀಡುತ್ತಾರೆ

(1) ಪೋಷಕರು
(2) ಶಿಕ್ಷಕರು
(3) ಹಿರಿಯ ವ್ಯಕ್ತಿಗಳು
(4) ಸಮವಯಸ್ಕರು

78. "ಬಾಲಕರು ಬಲಶಾಲಿಗಳು ಮತ್ತು ಬಾಲಕಿಯರು ಬಲಹೀನರು" ಎಂಬುದು ಇದಕ್ಕೆ ಉದಾಹರಣೆಯಾಗಿದೆ
(1) ಲಿಂಗ ತಾರತಮ್ಯ
(2) ಲಿಂಗ ಗುರುತಿಸುವಿಕೆ
(3) ಲಿಂಗ ಸಾಮ್ಯತೆ
(4) ಲಿಂಗ ಪಾತ್ರ

79. ವೈಗೋಟ್ಸ್ಕಿ ರವರ ಪ್ರಕಾರ "ಸಾರುವೆ" (Scaffolding) ನ ಅರ್ಥ
(1) ಕಲಿಕೆಯ ಮಟ್ಟವನ್ನು ಬದಲಾಯಿಸುವುದು
(2) ಬೋಧನೆಯ ಮಟ್ಟವನ್ನು ಬದಲಾಯಿಸುವುದು
(3) ಬೆಂಬಲದ ಮಟ್ಟವನ್ನು ಬದಲಾಯಿಸುವುದು
(4) ಚಿಂತನೆಯ ಮಟ್ಟವನ್ನು ಬದಲಾಯಿಸುವುದು

80. ಒಂದು ಮಗು ಇತರರ ಮುಖದ ಭಾವಗಳಿಗೆ ಪ್ರತಿಕ್ರಿಯೆ ನೀಡುತ್ತಿಲ್ಲ. ಈ ಮಗುವಿನಲ್ಲಿ ಗಮನಿಸಬಹುದಾದ ಸವಾಲು
(1) ಮೂಳೆಗಳ ಸವಾಲು
(2) ಕಲಿಕಾ ಸವಾಲು
(3) ದೃಷ್ಟಿ ಸವಾಲು
(4) ಶ್ರವಣ ಸವಾಲು

81. ಈ ಕೆಳಗಿನ ಮನೋವಿಜ್ಞಾನಿಗಳಲ್ಲಿ ಭಾವನಾತ್ಮಕ ಬುದ್ಧಿಶಕ್ತಿ ಪರಿಕಲ್ಪನೆಯನ್ನು ಪ್ರತಿಪಾದಿಸಿದವರು
(1) ಜೀನ್ ಪಿಯಾಜೆ
(2) ಡೇನಿಯಲ್ ಗೋಲ್‌ಮನ್
(3) ಹಾರ್ವರ್ಡ್ ಗಾರ್ಡನರ್
(4) ಸ್ಟರ್ನ್‌ಬರ್ಗ್

82. ಈ ಕೆಳಗಿನವುಗಳಲ್ಲಿ ಸಾಮಾಜಿಕ ವಿಕಾಸಕ್ಕೆ ಸಂಬಂಧಿಸಿದ ಉದಾಹರಣೆ
(1) ಸಾಹಸ ಪ್ರವೃತ್ತಿ
(2) ಬೇರೆಯವರಿಗೆ ಸಹಾಯ ಮಾಡುವುದು
(3) ವಿಮರ್ಶಿಸುವ ಸಾಮರ್ಥ್ಯ ಹೆಚ್ಚಿಸಿಕೊಳ್ಳುವುದು
(4) ಕೂಟ(ಗುಂಪು)ಗಳನ್ನು ರಚನೆ ಮಾಡುವುದು

83. ತಾರುಣ್ಯಾವಸ್ಥೆಗೆ ಸಂಬಂಧಿಸಿದ ಲಕ್ಷಣ
(1) ವೇಗವಾದ ಭೌತಿಕ ಬೆಳವಣಿಗೆ
(2) ಕಡಿಮೆ ಭಾವನಾತ್ಮಕತೆ
(3) ಕುಂಠಿತ ಭೌತಿಕ ಬೆಳವಣಿಗೆ
(4) ಸಾಮಾಜಿಕ ಅನಪೇಕ್ಷಿತ ವರ್ತನೆಗಳು

www.prepp.in

Prepp
Your Personal Exams Guide

84. ಕಲಿಕೆಯು ನಿರ್ದಿಷ್ಟದಿಂದ ಸಾಮಾನ್ಯೀಕರಣದ ಕಡೆಗೆ ಸಾಗುವ ಬೋಧನಾ ಉಪಕ್ರಮ

(1) ಅನುಗಮನ ಉಪಕ್ರಮ

(2) ನಿಗಮನ ಉಪಕ್ರಮ

(3) ಸಮಸ್ಯಾ ಪರಿಹಾರ ಉಪಕ್ರಮ

(4) ಅನುಗಮನ-ನಿಗಮನ ಉಪಕ್ರಮ

85. ಅನುಕರಣೆ, ಕುತೂಹಲ ಮತ್ತು ಪ್ರಶ್ನೆಗಳನ್ನು ಕೇಳುವುದು ಈ ಹಂತದ ಲಕ್ಷಣ

(1) ಪೂರ್ವ ಬಾಲ್ಯಾವಸ್ಥೆ

(2) ಉತ್ತರ ಬಾಲ್ಯಾವಸ್ಥೆ

(3) ಶೈಶವಾವಸ್ಥೆ

(4) ತಾರುಣ್ಯಾವಸ್ಥೆ

86. ಕಲಿಕೆ ಉಂಟಾಗಲು ಈ ಕೆಳಗಿನ ಅಂಶ ಕಡ್ಡಾಯವಲ್ಲ

(1) ಬೋಧನೆ

(2) ಪ್ರೇರಕ

(3) ಗುರಿ

(4) ಅಡೆತಡೆ

87. ಈ ಕೆಳಗಿನ ಕಲಿಕೆಯಿಂದ ವರ್ತನೆಗಳನ್ನು ರೂಪಿಸಬಹುದು

(1) ಕ್ರಿಯಾಜನ್ಯ ಅನುಬಂಧ

(2) ಶಾಸ್ತ್ರೀಯ ಅನುಬಂಧ

(3) ಪ್ರಯತ್ನ-ದೋಷ

(4) ಒಳನೋಟ

88. ಈ ಕೆಳಗಿನವುಗಳಲ್ಲಿ ಕಲಿಕೆಗೆ ಅವಶ್ಯಕವಿರುವ ಬಾಹ್ಯ ಅಂಶ

(1) ಪುನರ್ಬಲನ

(2) ಆಸಕ್ತಿ

(3) ಮನೋಧೋರಣೆ

(4) ಪೂರ್ವ ಅನುಭವಗಳು

89. ಈ ಕೆಳಗಿನವುಗಳಲ್ಲಿ ಅಭಿಪ್ರೇರಣೆಯನ್ನು ಉಂಟುಮಾಡದ ತಂತ್ರ

(1) ಸ್ಪರ್ಧೆಗಳನ್ನು ಏರ್ಪಡಿಸುವುದು

(2) ಪುನರ್ಬಲನಗಳನ್ನು ನೀಡುವುದು

(3) ಪುನರಾವರ್ತನೆ ಮಾಡುವುದು

(4) ಪಾಠಕ್ಕೆ ಪೀಠಿಕೆ ನೀಡುವುದು

90. ಅನ್ವೇಷಣಾ ಬೋಧನಾ ವಿಧಾನದಲ್ಲಿ ಶಿಕ್ಷಕರು ವಿದ್ಯಾರ್ಥಿಯನ್ನು ಈ ಕೆಳಗಿನಂತೆ ಪರಿಗಣಿಸುತ್ತಾರೆ

(1) ಶಿಕ್ಷಕ

(2) ತರಬೇತುದಾರ

(3) ಮಾರ್ಗದರ್ಶಕ

(4) ಸಂಶೋಧಕ

www.prepp.in

Prepp
Your Personal Exams Guide

# KANNADA MEDIUM
## PART – IV
### ಗಣಿತ

91. ಇವುಗಳಲ್ಲಿ ಸರಿಯಾದ ಹೇಳಿಕೆಯು

(1) ಸ್ವಾಭಾವಿಕ ಸಂಖ್ಯೆಗಳ ಗಣವು ಸಂಕಲನ ಮತ್ತು ವ್ಯವಕಲನದ ಆವೃತ ಗುಣವನ್ನು ಪಾಲಿಸುತ್ತದೆ

(2) ಪೂರ್ಣಾಂಕಗಳ ಗಣವು ಗುಣಾಕಾರ ಮತ್ತು ಭಾಗಾಕಾರದ ಆವೃತ ಗುಣವನ್ನು ಪಾಲಿಸುತ್ತದೆ

(3) ವಾಸ್ತವ ಸಂಖ್ಯೆಗಳ ಗಣವು ಗುಣಾಕಾರ ಮತ್ತು ಭಾಗಾಕಾರದ ಆವೃತ ಗುಣವನ್ನು ಪಾಲಿಸುತ್ತದೆ

(4) ಭಾಗಲಬ್ಧ ಸಂಖ್ಯೆಗಳ ಗಣವು ಸಂಕಲನ ಮತ್ತು ವ್ಯವಕಲನದ ಆವೃತ ಗುಣವನ್ನು ಪಾಲಿಸುತ್ತದೆ

92. $\frac{2}{3}$ ಮತ್ತು $\frac{3}{5}$ ರ ನಡುವಿನ ಭಿನ್ನರಾಶಿಯು

(1) $\frac{31}{50}$ (2) $\frac{2}{5}$ (3) $\frac{1}{3}$ (4) $\frac{1}{15}$

93. $\sqrt{43-\sqrt{47+\sqrt{20-\sqrt{256}}}}$ ರ ಬೆಲೆಯು

(1) 6.6 (2) 7.5 (3) 6 (4) 7

94. $2x+3$, 16, 20, 23, $3x$ ಮತ್ತು 21 ಇವುಗಳ ಸರಾಸರಿಯು 18 ಆದಾಗ, ಅವುಗಳ ಮಧ್ಯಾಂಕವು

(1) 5 (2) 21.5 (3) 18 (4) 20

95. 'x' ನ ಶೇಕಡ 5.2 ರ ಪ್ರಮಾಣವು 2.08 ಕ್ಕೆ ಸಮವಾದರೆ, x ನ ಬೆಲೆಯು

(1) 40 (2) 80 (3) 800 (4) 400

96. $x+y=14$ ಮತ್ತು $x-y=4$ ಆದಾಗ, $2x+y$ ನ ಬೆಲೆಯು

(1) 19 (2) 23 (3) 28 (4) 13

SPACE FOR ROUGH WORK

97. ಕುಂದಿಲ್ಲದ ಮೂರು ನಾಣ್ಯಗಳನ್ನು ಒಟ್ಟಿಗೆ ಒಂದು ಬಾರಿ ಚಿಮ್ಮಿದಾಗ, 'ಎಲ್ಲಾ ಶಿರಗಳು' ಮೇಲೆ ಬರುವ ಸಂಭವನೀಯತೆಯು

(1) $\frac{1}{8}$ (2) $\frac{3}{8}$ (3) $\frac{1}{2}$ (4) $\frac{2}{8}$

98. $\left(\frac{4}{3}\right)^{3x-2} \times \left(\frac{3}{4}\right)^{3} = \left(\frac{4}{3}\right)^{16}$ ಆದಾಗ, x ನ ಬೆಲೆಯು

(1) 7 (2) 5 (3) $\frac{4}{3}$ (4) $\frac{3}{4}$

99. $4x^2 - 10x$ ನ್ನು ಒಂದು ಪೂರ್ಣವರ್ಗವನ್ನಾಗಿ ಮಾಡಲು ಅದಕ್ಕೆ ಸೇರಿಸಬೇಕಾದ ಪ್ರಮಾಣವು

(1) $\frac{16}{25}$ (2) $\frac{25}{4}$ (3) $\frac{4}{25}$ (4) $\frac{25}{2}$


100. ನಿಯಮಿತ ಷಡ್ಭುಜಾಕೃತಿಯ ಎಲ್ಲಾ ಒಳಕೋನಗಳ ಮೊತ್ತವು

(1) 360° (2) 540° (3) 720° (4) 900°

101. $\frac{x-4}{x-5} = \frac{4}{6}$ ಈ ಸಮೀಕರಣದಲ್ಲಿ 'x' ನ ಬೆಲೆಯು

(1) 1 (2) 2 (3) $-2$ (4) $-1$

102. ಚಿತ್ರದಲ್ಲಿ AB || CD, PQ ⊥ AR ಮತ್ತು $\angle QRC = 35°$ ಆದರೆ, $\angle QPB$ ಯ ಅಳತೆಯು





(1) 145° (2) 70° (3) 125° (4) 135°

SPACE FOR ROUGH WORK

Prepp
Your Personal Exams Guide

103. ದತ್ತ ಚಿತ್ರದಲ್ಲಿ ಕೊಟ್ಟಿರುವ ಅಳತೆಗಳಿಗೆ, $\Delta BAC \cong \Delta DCA$, ಈ ಹೇಳಿಕೆಯನ್ನು ಸಮರ್ಥಿಸಲು ಸಹಾಯಕವಾಗುವ ತ್ರಿಭುಜಗಳ ಸರ್ವಸಮತೆಯ ನಿಯಮವು




(1) SAS ನಿಯಮ
(2) SSA ನಿಯಮ
(3) ASA ನಿಯಮ
(4) SSS ನಿಯಮ

104. ನೇರ ವೃತ್ತಪಾದ ಶಂಕುವಿನ ಓರೆ ಎತ್ತರವು ಅದರ ಪಾದದ ತ್ರಿಜ್ಯದ ಎರಡರಷ್ಟಿದೆ, ಅದರ ವಕ್ರಮೇಲ್ಮೈ ವಿಸ್ತೀರ್ಣವು 308 $cm^2$ ಆದಾಗ, ಅದರ ಪಾದದ ವ್ಯಾಸವು $\left(\pi = \frac{22}{7}\right.$ ಎಂದು ಉಪಯೋಗಿಸಿ $\left.\right)$

(1) 3.5 cm
(2) 7 cm
(3) 10.5 cm
(4) 14 cm

105. $15/4, 7/2, 13/4, .....$ ಈ ಸಮಾಂತರ ಶ್ರೇಢಿಯಲ್ಲಿನ ಸಾಮಾನ್ಯ ವ್ಯತ್ಯಾಸವು

(1) $\frac{1}{4}$
(2) 4
(3) $-\frac{1}{2}$
(4) $-\frac{1}{4}$


106. 'A' ಎಂಬ ವ್ಯಕ್ತಿಯು ವಸ್ತು ಒಂದನ್ನು 18% GST ಯನ್ನು ಸೇರಿಸಿ ₹ 9,440 ಕ್ಕೆ ಕೊಳ್ಳುತ್ತಾನೆ. GST ಯನ್ನು ಸೇರಿಸುವ ಮುಂಚೆ ಆ ವಸ್ತುವಿನ ನಮೂದು ಬೆಲೆಯು

(1) ₹ 8,800
(2) ₹ 8,000
(3) ₹ 9,000
(4) ₹ 8,600

SPACE FOR ROUGH WORK

Prepp
Your Personal Exams Guide

107. 'O' ಕೇಂದ್ರವುಳ್ಳ ವೃತ್ತದಲ್ಲಿ $\angle AOB = 5x$, $\angle AOC = 2x$ ಮತ್ತು $\angle BOC = x$, ಆದರೆ ವಿಕರ್ಣವನ್ನು ಹೊಂದಿರುವ ಲಂಬಕೋನ ತ್ರಿಭುಜವು




(1) Δ AOB (2) Δ AOC (3) Δ BCA (4) Δ BOC

108. ಒಂದು ಚತುರ್ಭುಜದ ನಾಲ್ಕು ಒಳಕೋನಗಳ ಅನುಪಾತವು 2 : 3 : 6 : 7 ಆದರೆ, ಅವುಗಳಲ್ಲಿನ ಅತಿ ದೊಡ್ಡ ಕೋನದ ಅಳತೆಯು

(1) 20° (2) 120° (3) 140° (4) 70°

109. $x + y = 12$ ಮತ್ತು $xy = 60$ ಆದಾಗ, $x^2 + y^2$ ನ ಬೆಲೆಯು

(1) 22 (2) 26 (3) 20 (4) 24

110. ಏಕರೂಪ ಜವ 110 km/hr ನೊಂದಿಗೆ ಚಲಿಸುತ್ತಿರುವ ಒಂದು ರೈಲು 24 ನಿಮಿಷಗಳಲ್ಲಿ ಕ್ರಮಿಸುವ ದೂರವು

(1) 42 km (2) 50 km (3) 56 km (4) 44 km

111. 10 cm, 6 cm ಮತ್ತು 8 cm ಬಾಹುಗಳ ಅಳತೆಯುಳ್ಳ ಅಸಮಬಾಹು ತ್ರಿಭುಜದ ವಿಸ್ತೀರ್ಣವು

(1) 24 cm$^2$ (2) 48 cm$^2$ (3) 96 cm$^2$ (4) 40 cm$^2$

SPACE FOR ROUGH WORK

Prepp
Your Personal Exams Guide

112. (x + 1) ಯು $x^4 + x^3 + x^2 + x + k$ ನ ಒಂದು ಅಪವರ್ತನ ಆದರೆ 'k' ನ ಬೆಲೆಯು
(1) – 4 (2) 4 (3) – 1 (4) 0

113. 88 cm ಪರಿಧಿಯುಳ್ಳ ಒಂದು ವೃತ್ತದ ವಿಸ್ತೀರ್ಣವು $\left(\pi = \frac{22}{7}\right.$ ಬಳಸಿ$\left.\right)$
(1) 516 $cm^2$ (2) 616 $cm^2$ (3) 606 $cm^2$ (4) 416 $cm^2$

114. I. 2 + 4 = 6, 6 ಒಂದು ಸಮಸಂಖ್ಯೆ
II. 6 + 4 = 10, 10 ಒಂದು ಸಮಸಂಖ್ಯೆ ಮತ್ತು
III. 10 + 8 = 18, 18 ಒಂದು ಸಮಸಂಖ್ಯೆ , ಹಾಗಾಗಿ
ಯಾವುದೇ ಎರಡು ಸಮಸಂಖ್ಯೆಗಳ ಮೊತ್ತ ಸಮಸಂಖ್ಯೆಯಾಗಿರುತ್ತದೆ. ಇದರಲ್ಲಿ ಕಂಡುಬರುವ ಗಣಿತೀಯ ಪ್ರಕ್ರಿಯೆ
(1) ಅನುಗಮನ ತಾರ್ಕಿಕತೆ (2) ನಿಗಮನ ತಾರ್ಕಿಕತೆ
(3) ವಿಶ್ಲೇಷಣಾ ತಾರ್ಕಿಕತೆ (4) ಸಂಶ್ಲೇಷಣಾ ತಾರ್ಕಿಕತೆ

115. ಗಣಿತ ಚಿಂತನೆಯ ಬೆಳವಣಿಗೆಯಾಗುವುದು
(1) ಪ್ರತ್ಯಕ್ಷಜನಿತ ಮತ್ತು ಪ್ರತಿಫಲಿತ ಚಿಂತನೆಯಿಂದ
(2) ಅನುಗಮನ ಮತ್ತು ನಿಗಮನ ಚಿಂತನೆಯಿಂದ
(3) ರಚನಾತ್ಮಕ ಮತ್ತು ಸಹಕಾರ ಚಿಂತನೆಯಿಂದ
(4) ವಿಶ್ಲೇಷಣಾ ಮತ್ತು ಸಂಶ್ಲೇಷಣಾ ಚಿಂತನೆಯಿಂದ

116. ಮಕ್ಕಳಲ್ಲಿ ಉಂಟಾಗುವ ಗಣಿತದ ಪ್ರಾಥಮಿಕ ಅರ್ಥೈಸುವಿಕೆಯು ಹೊಂದಿರುವ ಅಂಶ
(1) ಮೂರ್ತ ಮತ್ತು ಸಂದರ್ಭೋಚಿತ (2) ವಸ್ತುನಿಷ್ಠ ಮತ್ತು ವ್ಯಕ್ತಿನಿಷ್ಠ
(3) ಸರಳ ಮತ್ತು ನಿರ್ದಿಷ್ಟ (4) ಸಂಖ್ಯೆ ಮತ್ತು ಪದಗಳು

SPACE FOR ROUGH WORK

Prepp
Your Personal Exams Guide

117. ಕಲಿಯುವವರು ಅಮೂರ್ತ ಅನುಭವವನ್ನು ಚರ್ಚೆಯ ಮೂಲಕ ವ್ಯಕ್ತಪಡಿಸುವ 5Eಮಾದರಿಯ ಹಂತ

(1) ತೊಡಗಿಸು
(2) ಅನ್ವೇಷಿಸು
(3) ವಿವರಿಸು
(4) ಮೌಲ್ಯೀಕರಿಸು

118. ಸೂತ್ರವನ್ನು ನೇರವಾಗಿ ಸಮಸ್ಯೆಯ ಮೇಲೆ ಉಪಯೋಗಿಸುವ ವಿಧಾನ

(1) ಅನುಗಮನ ವಿಧಾನ
(2) ನಿಗಮನ ವಿಧಾನ
(3) ಸಮಸ್ಯಾ ಪರಿಹಾರ ವಿಧಾನ
(4) ಯೋಜನಾ ವಿಧಾನ

ಮಾರ್ಗದರ್ಶಿ ಸ್ಟಡಿ ಸರ್ಕಲ್
ಕೊಪ್ಪಳ. ಮೊ: 7760582101

119. ಗಣಿತ ಕಲಿಕೆಯಲ್ಲಿ ವಿದ್ಯಾರ್ಥಿಯ ಆಳವಾದ ತಿಳುವಳಿಕೆಯ ಬಗ್ಗೆ ಮೌಲ್ಯಯುತವಾಗಿ ಒಳನೋಟವನ್ನು ಒದಗಿಸುವ ಅಂಶ

(1) ವಿಷಯಾಂಶ ನಕ್ಷೆ
(2) ಸಂದರ್ಭ ನಕ್ಷೆ
(3) ಪರಿಕಲ್ಪನಾ ನಕ್ಷೆ
(4) ಜ್ಞಾನಾತ್ಮಕ ನಕ್ಷೆ

120. ಹೇಳಿಕೆ (A) : ಪಾಠ ಆರಂಭಿಸುವ ಮೊದಲು ವಿದ್ಯಾರ್ಥಿಗಳ ಪೂರ್ವ ಜ್ಞಾನವನ್ನು ಪರಿಶೀಲಿಸುವ ಮೂಲಕ, ಅವರು ಈಗಾಗಲೇ ತಿಳಿದಿರುವ ವಿಷಯಗಳನ್ನು ನೆನಪಿಸಿಕೊಳ್ಳುವಂತೆ ಮಾಡಬಹುದು.

ಕಾರಣ (R) : ವಿದ್ಯಾರ್ಥಿಗಳು ತಾವು ಕಲಿಯಲಿರುವ ವಿಷಯದ ಬಗ್ಗೆ ಒಳನೋಟವನ್ನು ಪಡೆಯುತ್ತಾರೆ.

(1) ಹೇಳಿಕೆ (A) ಸರಿಯಾಗಿದ್ದು, ಮತ್ತು ಕಾರಣ (R) ಹೇಳಿಕೆಯನ್ನು ಬೆಂಬಲಿಸುತ್ತದೆ
(2) ಹೇಳಿಕೆ (A) ಸರಿಯಾಗಿದ್ದು, ಆದರೆ ಕಾರಣ (R) ಹೇಳಿಕೆಯನ್ನು ಬೆಂಬಲಿಸುವುದಿಲ್ಲ
(3) ಹೇಳಿಕೆ (A) ಸರಿಯಾಗಿದ್ದು ಮತ್ತು ಕಾರಣ (R) ತಪ್ಪಾಗಿದೆ
(4) ಹೇಳಿಕೆ (A) ತಪ್ಪಾಗಿದ್ದು ಮತ್ತು ಕಾರಣ (R) ಸರಿಯಾಗಿದೆ


SPACE FOR ROUGH WORK

www.prepp.in

Prepp
Your Personal Exams Guide

## KANNADA MEDIUM
## PART – V
### ಪರಿಸರ ಅಧ್ಯಯನ

121. ಐದನೇ ತರಗತಿಯ ವಿದ್ಯಾರ್ಥಿಯು ''ಕುಟುಂಬ''ಕ್ಕೆ ಸಂಬಂಧಿಸಿದ ಯೋಜನೆ (project) ಯನ್ನು ಮಾಡುತ್ತಿದ್ದಾನೆ. ಆತ ಈ ಕೆಳಗಿನ ಚಿಹ್ನೆಯನ್ನು ಬಳಸಿದ್ದಾನೆ.



ಈ ಚಿಹ್ನೆಯು ಪ್ರತಿನಿಧಿಸುವ ಸಂಬಂಧ

(1) ತಂದೆ – ತಾಯಿ
(2) ಅಕ್ಕ – ತಂಗಿ
(3) ಸಹೋದರ – ಸಹೋದರಿ
(4) ತಂದೆ – ಮಗಳು

122. ಭಾರತದ ಅತಿ ವಿಸ್ತಾರವಾದ ಉಪ್ಪು ನೀರಿನ ಸರೋವರ

(1) ಸಾಂಬಾರ್
(2) ದಿಡ್ವಾನ್
(3) ಸಾರಗೋಲ್
(4) ಪುಷ್ಕರ್

123. ನಮ್ಮ ಸೌರವ್ಯೂಹದಲ್ಲಿ, ಪೂರ್ವದಿಂದ ಪಶ್ಚಿಮಕ್ಕೆ ಭ್ರಮಿಸುವ ಗ್ರಹ

(1) ಶನಿ
(2) ಗುರು
(3) ಶುಕ್ರ
(4) ಮಂಗಳ

124. ಆವೇಶಪೂರಿತ ವಸ್ತುವು ಪ್ರಯೋಗಿಸುವ ಬಲ

(1) ಘರ್ಷಣೆ
(2) ಸ್ಥಾಯಿ ವಿದ್ಯುತ್ ಬಲ
(3) ಒತ್ತಡ
(4) ಗುರುತ್ವಾಕರ್ಷಣ ಬಲ

125. ವಿದ್ಯುತ್ ಕೋಶದ ಎರಡೂ ತುದಿಗಳನ್ನು ಸ್ವಿಚ್ ಮತ್ತು ಬಲ್ಬ್‌ಗಳಂತಹ ಸಾಧನಗಳ ಮೂಲಕ ಜೋಡಿಸದೇ ನೇರವಾಗಿ ಸಂಪರ್ಕಿಸಬಾರದು. ಏಕೆಂದರೆ

(1) ಅದು ಹ್ರಸ್ವ ಮಂಡಲವನ್ನು ಉಂಟುಮಾಡಬಹುದು
(2) ಮಿತಿಮೀರಿದ ಬಿಸಿಯಾಗುವಿಕೆಗೆ ಕಾರಣವಾಗಬಹುದು
(3) ರಾಸಾಯನಿಕಗಳು ಕ್ಷಿಪ್ರವಾಗಿ ಬರಿದಾಗಬಹುದು
(4) ತಂತಿಯನ್ನು ಕ್ಷಿಪ್ರವಾಗಿ ದಹಿಸಬಹುದು

126. ಪಾಪೆಯ ಗಾತ್ರವನ್ನು ನಿಯಂತ್ರಿಸುವ ರಚನೆ

(1) ವರ್ಣಪಟಲ
(2) ಕಾರ್ನಿಯ
(3) ಮಸೂರ
(4) ಅಕ್ಷಿಪಟಲ

127. ಪಕ್ಷಿಯೊಂದರ ವೇಗ 180 km/h ಇದನ್ನು m/s ಗಳಲ್ಲಿ ವ್ಯಕ್ತಪಡಿಸಿದಾಗ ಅದರ ಮೌಲ್ಯ

(1) 1800 m/s
(2) 180 m/s
(3) 60 m/s
(4) 50 m/s

Prepp
Your Personal Exams Guide

128. ನೀರಿನಲ್ಲಿರುವ ಆಕ್ಸಿಜನ್ ಮತ್ತು ಹೈಡ್ರೋಜನ್‌ನ ಅನುಪಾತ
(1) 1 : 2 (2) 2 : 1 (3) 2 : 2 (4) 3 : 1

129. ವಿನೆಗರ್‌ನ ರಾಸಾಯನಿಕ ಹೆಸರು
(1) ಸೋಡಿಯಂ ಹೈಡ್ರೋಜನ್ ಕಾರ್ಬೋನೇಟ್ (2) ಸೋಡಿಯಂ ಕಾರ್ಬೋನೇಟ್
(3) ಅಸಿಟಿಕ್ ಆಮ್ಲ (4) ಫಾರ್ಮಿಕ್ ಆಮ್ಲ

130. ಕಲ್ಲು ಹೂಗಳಿಂದ ಪಡೆಯಲಾಗುವ ನೈಸರ್ಗಿಕ ಸೂಚಕ
(1) ಫೀನಾಫ್ತಲೀನ್ (2) ಮೀಥೈಲ್ ಆರೇಂಜ್
(3) ಅರಿಶಿನ (4) ಲಿಟ್ಮಸ್

131. ವೈದ್ಯಕೀಯ ತಾಪಮಾಪಕದ ವ್ಯಾಪ್ತಿ
(1) 25°C ರಿಂದ 35°C (2) 35°C ರಿಂದ 42°C
(3) –10°C ರಿಂದ 110°C (4) 0°C ರಿಂದ 100°C

132. ಸಮುದ್ರದ ನೀರಿನಿಂದ ಉಪ್ಪನ್ನು ಪಡೆಯುವ ವಿಧಾನ
(1) ಸೋಸುವಿಕೆ (2) ಸಾಂದ್ರೀಕರಣ (3) ಆವೀಕರಣ (4) ಉತ್ಪತನ

133. ಸಲ್ಫ್ಯೂರಸ್ ಆಮ್ಲದ ರಾಸಾಯನಿಕ ಸೂತ್ರ
(1) $H_2SO_4$ (2) $H_2SO_3$ (3) $H_3PO_4$ (4) $C_6H_5SO_3H$

134. ನೀಲಿ ಮೈಲುತುತ್ತ ಇದರ ರಾಸಾಯನಿಕ ಹೆಸರು
(1) ಕಬ್ಬಿಣದ ಸಲ್ಫೇಟ್ (2) ತಾಮ್ರದ ಸಲ್ಫೇಟ್
(3) ಕ್ಯಾಲ್ಸಿಯಂ ಸಲ್ಫೇಟ್ (4) ಮೆಗ್ನೀಶಿಯಂ ಸಲ್ಫೇಟ್

135. ನಿರ್ದಿಷ್ಟ ಪ್ರದೇಶದಲ್ಲಿ ಮಾತ್ರ ಕಂಡುಬರುವ ಸಸ್ಯಗಳು ಮತ್ತು ಪ್ರಾಣಿ ಪ್ರಭೇದಗಳನ್ನು ಹೀಗೆನ್ನುವರು
(1) ಅಪಾಯದ ಅಂಚಿನಲ್ಲಿರುವ ಪ್ರಭೇದಗಳು (2) ಸ್ಥಳೀಯ ಪ್ರಭೇದಗಳು
(3) ಅಳಿದುಹೋದ ಪ್ರಭೇದಗಳು (4) ಆದ್ಯಪ್ರವರ್ತಕ ಪ್ರಭೇದಗಳು

136. ಅಡ್ರಿನಲ್ ಗ್ರಂಥಿಯ ಕಾರ್ಯ
(1) ಬೆಳವಣಿಗೆಯನ್ನು ನಿಯಂತ್ರಿಸುತ್ತದೆ
(2) ರಕ್ತದಲ್ಲಿ ಸಕ್ಕರೆಯ ಪ್ರಮಾಣವನ್ನು ನಿಯಂತ್ರಿಸುತ್ತದೆ
(3) ರಕ್ತದಲ್ಲಿ ಲವಣಗಳ ಸಮತೋಲನವನ್ನು ಸಮರ್ಪಕವಾಗಿ ನಿಯಂತ್ರಿಸುತ್ತದೆ
(4) ಪ್ರೌಢಾವಸ್ಥೆಯ ಪ್ರಾರಂಭದಲ್ಲಿ ದೇಹದಲ್ಲಿನ ಬದಲಾವಣೆಗಳನ್ನು ಪ್ರಚೋದಿಸುತ್ತದೆ ಮತ್ತು ನಿಯಂತ್ರಿಸುತ್ತದೆ

Prepp
Your Personal Exams Guide

137. ಆಕ್ಸಿಜನ್ ರಹಿತ ಉಸಿರಾಟದ ಅಂತಿಮ ಉತ್ಪನ್ನಗಳು
(1) ಲ್ಯಾಕ್ಟಿಕ್ ಆಮ್ಲ ಮತ್ತು ಶಕ್ತಿ
(2) ಆಲ್ಕೋಹಾಲ್, ಕಾರ್ಬನ್ ಡೈ ಆಕ್ಸೈಡ್ ಮತ್ತು ಶಕ್ತಿ
(3) ಗ್ಲುಕೋಸ್, ಆಕ್ಸಿಜನ್ ಮತ್ತು ಶಕ್ತಿ
(4) ಕಾರ್ಬನ್ ಡೈ ಆಕ್ಸೈಡ್, ನೀರು ಮತ್ತು ಶಕ್ತಿ

138. ಬ್ಯಾಕ್ಟೀರಿಯಾದಿಂದ ಉಂಟಾಗುವ ರೋಗಗಳು
(1) ಕ್ಷಯ ಮತ್ತು ಮಲೇರಿಯಾ
(2) ಹೆಪಟೈಟಿಸ್-ಎ ಮತ್ತು ವಿಷಮಶೀತ ಜ್ವರ
(3) ಕಾಲರಾ ಮತ್ತು ಕ್ಷಯ
(4) ಪೋಲಿಯೋ ಮತ್ತು ಸೀತಾಳೆಸಿಡುಬು

139. ಹದ್ದಿನ ಸರಾಸರಿ ಜೀವಿತಾವಧಿ
(1) 70 ವರ್ಷಗಳು (2) 20 ವರ್ಷಗಳು (3) 150 ವರ್ಷಗಳು (4) 70 – 80 ವರ್ಷಗಳು

140. ಈ ಕೆಳಗಿನವುಗಳಲ್ಲಿ ಬಹುವಾರ್ಷಿಕ ಸಸ್ಯ
(1) ಶುಂಠಿ (2) ಎಲೆಕೋಸು (3) ಕಬ್ಬು (4) ಹತ್ತಿ

141. ಕಾಲಂ – I ರಲ್ಲಿ ಕೊಟ್ಟಿರುವ ವಸ್ತುಗಳನ್ನು ಕಾಲಂ – II ರಲ್ಲಿ ಕೊಟ್ಟಿರುವ ಸೂಕ್ತ ವಸ್ತುಗಳೊಂದಿಗೆ ಹೊಂದಿಸಿ.

| ಕಾಲಂ – I | ಕಾಲಂ – II |
|---|---|
| i. ಕಾರ್ಬೋಹೈಡ್ರೇಟ್‌ಗಳು | a. ಅಮೈನೊ ಆಮ್ಲಗಳು |
| ii. ಪ್ರೋಟೀನ್‌ಗಳು | b. ಕೊಬ್ಬಿನ ಆಮ್ಲ ಮತ್ತು ಗ್ಲಿಸರಾಲ್ |
| iii. ಕೊಬ್ಬು | c. ಸಕ್ಕರೆ |

(1) i – c ii – a iii – b
(2) i – c ii – b iii – a
(3) i – b ii – c iii – a
(4) i – a ii – b iii – c

142. ವಸ್ತುವು ಆವೇಶಪೂರಿತವಾಗಿದೆಯೇ ಇಲ್ಲವೇ ಎಂಬುದನ್ನು ಪತ್ತೆಹಚ್ಚಲು ಬಳಸುವ ಉಪಕರಣ
(1) ಪೆರಿಸ್ಕೋಪ್ (2) ಕೆಲಿಡಿಯೋಸ್ಕೋಪ್ (3) ಸೂಕ್ಷ್ಮದರ್ಶಕ (4) ವಿದ್ಯುದ್ದರ್ಶಕ

143. ವಿಜ್ಞಾನ ವಸ್ತುಪ್ರದರ್ಶನ ಪ್ರಚೋದಿಸುವುದು
(1) ಶಿಸ್ತು ಮತ್ತು ಯೋಜನೆ
(2) ಪ್ರಾಮಾಣಿಕತೆ ಮತ್ತು ಏಕತೆ
(3) ಸೃಜನಶೀಲತೆ ಮತ್ತು ಸಂಶೋಧನಾ ಪ್ರವೃತ್ತಿ
(4) ಆತ್ಮವಿಶ್ವಾಸ ಮತ್ತು ಸ್ವಮೌಲ್ಯಮಾಪನ

144. ಬೋಧನೆ-ಕಲಿಕಾ ಪ್ರಕ್ರಿಯೆಯ ಮೂರು ಘಟಕಗಳು
(1) ಉದ್ದಿಷ್ಟಗಳು, ಪಠ್ಯಕ್ರಮ ಮತ್ತು ಪ್ರಯೋಗಾತ್ಮಕತೆ
(2) ಉದ್ದಿಷ್ಟಗಳು, ಪಠ್ಯಕ್ರಮ ಮತ್ತು ಮೌಲ್ಯಮಾಪನ
(3) ಉದ್ದಿಷ್ಟಗಳು, ಪಠ್ಯಕ್ರಮ ಮತ್ತು ಪರೀಕ್ಷೆ
(4) ಉದ್ದಿಷ್ಟಗಳು, ಪಠ್ಯಕ್ರಮ ಮತ್ತು ವಿವರಣೆ

145. ಕಾರ್ಯಪೂರ್ವ ಹಂತ

(1) 0 – 2 ವರ್ಷಗಳು
(2) 2 – 7 ವರ್ಷಗಳು
(3) 7 – 11 ವರ್ಷಗಳು
(4) 11 – 15 ವರ್ಷಗಳು

146. NCF 2005 ರ ಶಿಫಾರಸ್ಸಿನಲ್ಲಿ ಶಿಕ್ಷಣ ಪಲ್ಲಟಗಳಿಂದ ಬದಲಾಗಬೇಕಾದದ್ದು ಶಿಕ್ಷಕ ಕೇಂದ್ರಿತ ಸ್ಥಿರ ವ್ಯವಸ್ಥೆಯಿಂದ

(1) ರೇಖೀಯ ಮಾನ್ಯತೆಯೆಡೆಗೆ
(2) ಕಲಿಕೆಯಲ್ಲಿ ನಿಷ್ಕ್ರಿಯ ಗ್ರಹಿಕೆಯೆಡೆಗೆ
(3) ಶಿಸ್ತಿನ ಗಮನ (Disciplinary focus)ದೆಡೆಗೆ
(4) ಕಲಿಕಾರ್ಥಿ ಕೇಂದ್ರಿತ ನಮ್ಯ ಪ್ರಕ್ರಿಯೆಯೆಡೆಗೆ

147. ಕ್ರಿಯಾ ಸಂಶೋಧನಾ ಪ್ರಕ್ರಿಯೆಯಲ್ಲಿ ದತ್ತಾಂಶವನ್ನು ಸಂಗ್ರಹಿಸಿ ಮತ್ತು ವಿಶ್ಲೇಷಿಸಿ ಕಾರ್ಯಗತಗೊಳಿಸುವ ಹಂತ

(1) ಯೋಜನಾ ಹಂತ
(2) ಅನುಷ್ಠಾನ ಹಂತ
(3) ಬೆಳವಣಿಗೆಯ ಹಂತ
(4) ಪ್ರತಿಬಿಂಬಿಸುವ ಹಂತ

148. ವೆನೇಡಿಯಂನ ವಿವಿಧ ಉತ್ಕರ್ಷಣ ಸ್ಥಿತಿಗಳ ಗುಣಗಳನ್ನು ಕಲಿಯುವ ಸಂದರ್ಭದಲ್ಲಿ ವಿದ್ಯಾರ್ಥಿ ವೆನೇಡಿಯಂ ಒಂದು ಉತ್ಕರ್ಷಣ ಸ್ಥಿತಿಯಿಂದ ಮತ್ತೊಂದು ಉತ್ಕರ್ಷಣ ಸ್ಥಿತಿಗೆ ಬದಲಾಗುವಲ್ಲಿ ನಿರ್ದಿಷ್ಟ ವಿನ್ಯಾಸ ಮತ್ತು ಬಣ್ಣದಲ್ಲಿನ ಬದಲಾವಣೆಯ ಸೊಬಗನ್ನು ಗಮನಿಸುತ್ತಾನೆ. ಇಲ್ಲಿ ವಿದ್ಯಾರ್ಥಿಯಲ್ಲಿ ಪೋಷಿಸಲ್ಪಡುವುದು

(1) ಸೃಜನಾತ್ಮಕ ಬೌದ್ಧಿಕತೆ
(2) ಅರಿವಿನ ಸಂಘರ್ಷ
(3) ಸೌಂದರ್ಯ ಪ್ರಜ್ಞೆ
(4) ಗೊಂದಲ

149. CLA ವಿಧಾನವು ಕಲಿಯುವವರಲ್ಲಿ ಶೈಕ್ಷಣಿಕ ಮತ್ತು ಸಾಮಾಜಿಕ ಕೌಶಲ್ಯಗಳನ್ನು ಸಮಗ್ರ ರೀತಿಯಲ್ಲಿ ಅಭಿವೃದ್ಧಿಪಡಿಸುತ್ತದೆ. ಇಲ್ಲಿ CLA ಎಂದರೆ

(1) ಸೃಜನಶೀಲ ಕಲಿಕಾ ವಿಧಾನ
(2) ಸಹಭಾಗಿ ಕಲಿಕಾ ವಿಧಾನ
(3) ಸಾಮಾನ್ಯ ಕಲಿಕಾ ವಿಧಾನ
(4) ನಿರಂತರ ಕಲಿಕಾ ವಿಧಾನ

150. ಭಾಷೆಯ ಸ್ವಾಧೀನ ಮತ್ತು ಅಭಿವೃದ್ಧಿಯ ಅತ್ಯಂತ ನಿರ್ಣಾಯಕ ಅವಧಿ

(1) ಶೈಶವಾವಸ್ಥೆ
(2) ವಯಸ್ಕ ಹಂತ
(3) ತಾರುಣ್ಯಾವಸ್ಥೆ
(4) ಬಾಲ್ಯಾವಸ್ಥೆ